ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಒಳ್ಳೆಯ ಪ್ರಶ್ನೆಯನ್ನು ಈಗ ಪ್ರಸ್ತಾಪ ಮಾಡಿದ್ದಾರೆ. ಈಗ ಇರತಕ್ಕಂಥ ಜಮೀನುಗಳಲ್ಲಿ ಕೈಗಾರಿಕೆಗಳಿಗೆ ಮತ್ತು ವಸತಿಗೆ ಜಮೀನಗಳನ್ನು ತೆಗೆದುಕೊಂಡರೆ ಮುಂದಿನ ದಿನಗಳಲ್ಲಿ ಭೂಮಿ ಕಡಿಮೆಯಾದರೆ, ಉತ್ಪತ್ತಿ ಕೂಡ ಕಡಿಮೆಯಾಗುತ್ತದೆ. ಆದ್ದರಿಂದ, ಮುಂದಿನ ದಿನಗಳಲ್ಲಿ quality of seeds ಮತ್ತು production ಅನ್ನು ಹೆಚ್ಚು ಮಾಡುವುದಕ್ಕೆ ನಮ್ಮ ಸಂಶೋಧನೆಯ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಬೇಕಾಗಿದೆ. ಈ ಒಂದು ನಿಟ್ಟಿನಲ್ಲಿ ಬಹಳಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎ.ಎಸ್. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಶ್ನೆಯನ್ನು ಮಾನ್ಯ ಕೃಷಿ ಸಚಿವರಿಗೆ ಕೇಲಿದ್ದೆ, ಇದಕ್ಕೆ ಉತ್ತರ ಬಂದಿಲ್ಲ. ಆದರೆ, ಉತ್ತರ ಒದಗಿಸುವುದಕ್ಕೆ ಕಾಲಾವಕಾಶ ಬೇಕೆಂದು ಮಾನ್ಯ ಕೃಷಿ ಮಾರುಕಟಟ್ಟೆ ಸಚಿವರು ಕೇಳಿದ್ದಾರೆ. ಆದ್ದರಿಂದ ಇವರ ಗಡಿ ಬಿಡಿಯಿಂದ ಇದಕ್ಕೆ ಉತ್ತರವನ್ನು ಯಾರು ಕೊಡಬೇಕೆಂಬುದು ಗೊತ್ತಿಲ್ಲದೆ ಈಗ ಕಾಲಾವಕಾಶ ಕೇಳಿದ್ದಾರೆಯೇ?

ಉಪಾಧ್ಯಕ್ಷರು : ನಾನು ಈಗ ಮಾನ್ಯ ಎಂ.ಟಿ.ಬಿ. ನಾಗರಾಜ್ ನವರು ಪ್ರಶ್ನೆ ಕೇಳುವಂತೆ ಹೇಳಿದ್ದೇನೆ. ಆದರೆ, ತಮ್ಮ ಪ್ರಶ್ನೆಗೆ ಇನ್ನು ೨-೩ ದಿವಸಗಳಲ್ಲಿ ಉತ್ತರ ಒದಗಿಸುತ್ತೇನೆಂದು ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಸಮಯ ಕೇಳಿದ್ದಾರೆ. ಈಗ ಎಂ.ಟಿ.ಬಿ. ನಾಗರಾಜ್ ರವರ ಪ್ರಶ್ನೆ.

**ಹೊಸಕೋಟೆ ತಾ॥ ರಾಜ್ಯ ಸರ್ಕಾರಿ ತಾಕರರ ಗೃಹ ನಿಮಾಣ ಸಹಕಾರ ಸಂಘವು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ ?**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೩೮ (೨೧೫೫)

ಸದಸ್ಯರ ಹೆಸರು : ಶ್ರೀ ನಾಗರಾಜು ಎಂ.ಟಿ.ಬಿ

ಉತ್ತರಿಸ ಬೇಕಾದ ಸಚಿವರು : ಶ್ರೀ ಜೆ.ಟಿ. ದೇವೇಗೌಡ (ಸಹಕಾರ

ಸಚಿವರು)

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಹೊಸಕೋಟೆ ತಾಲ್ಲೂಕು ರಾಜ್ಯಸದರಿ ಸಂಘವು ೨೦೦೧ನೇ ವರ್ಷದಿಂದ ಸರ್ಕಾರಿ ನೌಕರರ ಗೃಹ ನಿರ್ಮಾಣ ಪ್ರಾರಂಭವಾಗಿರುತ್ತದೆ. ಸಹಕಾರ ಸಂಘವು ಯಾವ ವರ್ಷದಲ್ಲಿ ಪ್ರಾರಂಭವಾಗಿದೆ ? | |
| ಆ. | ಸಂಘವು ಪ್ರಾರಂಭಿವಾದಾಗಿನಿಂದ ಸಂಘವು ಇದುವರೆಗೆ ಯಾವುದೇ ಜಮೀನುಗಳನ್ನು ನಿದೇಶನಕ್ಕಗಿ ಯಾವ ಯಾವ ನಿವೇಶನಕ್ಕಗಿ ಅಭಿವೃದ್ಧಪಡಿಸಲು ಖರೀದಿ ಗ್ರಾಮಗಳ ಸರ್ವೆ ನಂ.ಗಳಲ್ಲಿ ಎಷ್ಟು ಮಾಡಿರುವುದಿಲ್ಲ. ಜಮೀನು ಖರೀದಿಸಲಾಗಿದೆ? | |
| ಇ. | ನಿವೇಶನಕ್ಕಗಿ ಜಮೀನನ್ನು ಸಂಘವು ಇದುವರೆಗೆ ಯಾವುದೇ ಜಮೀನುಗಳನ್ನು ಖರೀದಿಸಿದ್ದಲ್ಲಿ ಎಷ್ಟು ಜನರಿಗೆ ನಿವೇಶನಕ್ಕಗಿ ಅಭಿವೃದ್ಧಿಪಡಿಸಲು ಖರೀದಿ ಮಾಡ– ನಿವೇಶನ ಅಭಿವೃದ್ದಿಪಡಿಸಿ ದಿರುವುದರಿಂದ ಸಂಘದ ಹೆಸರಿನಲ್ಲಿ ನಿವೇಶನ ವಿತರಿಸಿದೆ? ಆ ಪೈಕಿ ಹಂಚಿಕೆ ಪ್ರಶ್ನೆ ಉದ್ಭವವಾಗುವುದಿಲ್ಲ. ಪರಿಶಿಷ್ಟಜಾತಿ ; ಪರಿಶಿಷ್ಟ ವರ್ಗದ ಎಷ್ಟು ನೌಕರರಿಗೆ ನಿವೇಶನ ಮಾಡಲಾಗಿದೆ. | |

ಈ. ಸರ್ಕಾರಿ ನೌಕರರಲ್ಲದವರಿಗೂ ಸಂಘದ ಹೆಸರಿನಲಿ ಇದುವರೆಗೆ ಯಾವುದೇ
ಸಂಘದ ಹೆಸರಿನಲ್ಲಿ ನಿವೇಶನ-ನಿವೇಶನ ನೀಡಿದಿರುವುದಿಲ್ಲ.
ವನ್ನು ನೀಡಿರುವುದು ಸರ್ಕಾರದ
ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ
ಇದು ನಿಯಮಬಾಹಿರವಲ್ಲವೆ?

ಉ. ಹಾಗಿದ್ದಲ್ಲಿ ಸರ್ಕಾರವು ಸಂಘದ ಸಂಘವು ಇದುವರೆಗೆ ಸದಸ್ಯರಿಗೆ ನಿವೇಶನಗಳ
ಮೇಲೆ ಕೈಗೊಂಡಿರುವ ಹಂಚಿಕೆ ಮಾಡಿರುವುದಿಲ್ಲ. ಆದರೂ ಸಂಘದಲ್ಲಿ
ಕ್ರಮಗಳೇನು? ಕೆಲವು ಇತರೆ ಕಾನೂನು ಬಾಹಿರ ಚಟುವಟಿಕೆಗಳು
ಜರುಗಿರುವುದು ಕಂಡು ಬಂದಿದ್ದು. ಈ ಬಗ್ಗೆ
ಸಹಕಾರ ಸಂಘಗಳ ಅಧಿನಿಯಮ ೧೯೫೯ರ
ಪ್ರಕರಣ ೬೪ ರಡಿಯಲ್ಲಿ ವಿಚಾರಣೆ ನಡೆಸಲು
ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ.ಟಿ.ಬಿ. ನಾಗರಾಜು : ಸನ್ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿ ಕೊಟ್ಟಿದ್ದಾರೆ. ಹೊಸಕೋಟೆ ತಾಲ್ಲೂಕು ರಾಜ್ಯ ಸಹಕಾರ ನೌಕರರ ಗೃಹ ನಿರ್ಮಾಣ ಸಂಘ ೨೦೦೧ನೇ ಇಸವಿಯಲ್ಲಿ ಪ್ರಾರಂಭವಾಗಿರುತ್ತದೆ. ಈ ಸಂಘ ಪ್ರಾರಂಭವಾದ ಮೇಲೆ ಸುಮಾರು ೩೨೫ ಸದಸ್ಯರ

ಸದಸ್ಯತ್ವವನ್ನು ಮಾಡಿಕೊಂಡು ಅವರಿಂದ ಸದಸ್ಯತ್ವ ಹಣವನ್ನೂ ಸಹ ವಸೂಲ್ಮಾಡಿದ್ದಾರೆ. ಮತ್ತೆ ಗೃಹ ನಿರ್ಮಾಣ ಸಂಘದ ಸದಸ್ಯರಿಗೆ ನಿವೇಶನ ಕೊಡುತ್ತೇವೆಂದು ಹೇಳಿ ಭೂಮಿಯನ್ನು ಕೊಂಡುಕೊಳ್ಳುವುದಕ್ಕಾಗಿ ೩೨೫ ಸದಸ್ಯರುಗಳಿಂದ ಮುಂಗಡವಾಗಿ ಹಣವನ್ನು ಪಡೆದುಕೊಂಡಿದ್ದಾರೆ. ಈ ಹಣದಿಂದ ಇವರು ಜಮೀನನ್ನು ಸಹ ಖರೀದಿ ಮಾಡಿದ್ದಾರೆ. ಆದರೆ, ಖಾಸಗಿ ಹೆಸರಿನಲ್ಲಿ ಜಮೀನನ್ನು ಖರೀದಿ ಮಾಡಿ ಅಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡುವುದಕ್ಕೆ ಜಿಲ್ಲಾಧಿಕಾರಿಯವರಿಂದ ಮಾಡಿಸಿದ್ದಾರೆ ಮತ್ತೆ ಬಿಎಂಆರ್‌ಡಿಎ ನಿಂದ ಅಪ್ರೂವಲ್ ಕೂಡ ಪಡೆದುಕೊಂಡಿದ್ದಾರೆ. ಇವತ್ತು ಬಡಾವಣೆಯನ್ನು ಫಾರ್ಮೇಷನ್ ಮಾಡಿ ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ. ಸದಸ್ಯತ್ವ ಪಡೆದುಕೊಂಡಿದ್ದಂಥ ೪೨೫ ಸದಸ್ಯರುಗಳಿಗೆ ಒಂದೂ ನಿವೇಶನವನ್ನೂ ಸಹ ಕೊಟ್ಟಿಲ್ಲ. ಇವರ ಮುಂಗಡ ಹಣದಿಂದ ಅವರು ಜಮೀನನ್ನು ಖರೀದಿ ಮಾಡಿದ್ದಾರೆ. ಮತ್ತೆ ಹೊಸಕೋಟೆ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವೆಂದು ರಿಜಿಸ್ಟ್ರೇಷನ್ ಮಾಡಿದ್ದಾಖುಎ. ಇದು ನಕಲು ಸಂಘವಾಗಿದೆ. ನೌಕರರು ಪ್ರತಿ ತಿಂಗಳೂ ಬರತಕ್ಕಂಥ ವೇತನದಲ್ಲಿ ಉಳಿತಾಯ ಮಾಡಿರತಕ್ಕಂಥ ಹಣದಿಂದ ನಿವೇಶನ ಪಡೆದುಕೊಳ್ಳಬೇಕೆಂದು ಇರತಕ್ಕಂಥ ನೌಕರರುಗಳಿಗೆ ಈ ನಕಲಿ ಸಂಘ ಮೋಸ ಮಾಡಿದೆ. ಮತ್ತೆ ಮಾನ್ಯ ಸಚಿವರು ಇಲ್ಲಿ ಎನು ಉತ್ತರ ಕೊಟ್ಟಿದ್ದಾರೆಂದರೆ, ಸಂಘವು ಇದುವರೆಗೆ ಸದಸ್ಯರಿಗೆ ನಿವೇಶನಗಳ ಹಂಚಿಕೆ ಮಾಡಿರುವುದಿಲ್ಲ. ಆದರೂ ಸಂಘದಲ್ಲಿ ಕೆಲವು ಇತರೆ ಕಾನೂನು ಬಾಹಿರ ಚಟುವಟಿಕೆಗಳು ಜರುಗಿರುವುದು ಕಂಡು ಬಂದಿದ್ದು, ಈ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ ೧೯೫೯ ರ ಪ್ರಕರಣ ೬೪ರಡಿಯಲ್ಲಿ ವಜಚಾರಣೆ ನಡೆಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ,ಎಂದು ಉತ್ತರ ಕೊಟ್ಟಿದ್ದಾರೆ. ಇಂಥ ನಕಲಿ ಸಂಘಗಳು ಎಲ್ಲಾ ತಾಲ್ಲೂಕುಗಳಲ್ಲಿ ಇವತ್ತಿನ ದಿವಸ ಪ್ರಾರಂಭವಾಗಿದೆ. ಈ ರೀತಿಯಾಗಿ ನೌಕರರನ್ನು ವಂಚನೆ ಮಾಡತಕ್ಕಂಥ ಇಂಥ ಸಂಘಗಳು ಇವತ್ತಿನ ದಿವಸ ಸಾಕಷ್ಟು ಇವೆ. ಆದ್ದರಿಂದ, ಸರಿಯಾದ ರೀತಿಯಲ್ಲಿ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿ ವರದಿ ಪಡೆದು ಇಂಥ

ಸಂಘಗಳ ಮೇಲೆ ಕ್ರಮ ಜರುಗಿಸಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು. ಇಂಥ ನಕಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಈ ಸಮಾಜದಲ್ಲಿ ನಿರ್ಮಾಣವಾಗಿ ಬಡ ನೌಕರರನ್ನು ವಂಚನೆ ಮಾಡತಕ್ಕಂಥ ಸಂಘಗಳ ಮೇಲೆ ಸರಿಯಾದ ರೀತಿಯಲ್ಲಿ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮತ್ತೆ ಈ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರ್ ವರ ಗಮನಕ್ಕೆ ತರುವುದೇನೆಂದರೆ, ಹೊಸಕೋಟೆ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ಏನು ಮಾಡಿದ್ದಾರೆಂದರೆ, ಪಕ್ಕದಲ್ಲಿರುವ ೮ ಎಕರೆ ಕೆರೆ ಅಂಗಳವನ್ನು ಸೇರಿಸಿಕೊಂಡು ಬಡಾವಣೆ ಮಾಡಿ ಖಾಸಗಿಯವರಿಗೆ ನಿವೇಶನಗಳನ್ನು ಹಂಚಿದ್ದಾರೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ತನಿಖೆ ಆಗಬೇಕೆಂದು ತಮ್ಮಲ್ಲಿಯೂ ಕೂಡ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಂಘ ಬೈಲಾ ಉಲ್ಲಂಘನೆ ಮಾಡಿದ್ದಾರೆಂದು ತಿಳಿದು ಬಂದಿದೆ. ಅವರು ಜಮೀನನ್ನು ಕ್ರಯಕ್ಕೆ ಪಡೆದಿಲ್ಲ. ಡೆವಲಪ್ ರ್ಸ ಮೂಲಕ ನೇರವಾಗಿ ಸೈಟ್ ಗಳನ್ನು ಖರೀದಿ ಮಾಡಬೇಕೆಂದು ತೀರ್ಮಾನ ಮಾಡಿ ೨೨೦ ರೂಪಾಯಿಗಳಂತೆ ಒಂದು ಒಪ್ಪಂದ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಅವರು ಬೈಲಾ ಉಲ್ಲಂಘನೆ ಮಾಡಿದ್ದಾರೆ, ಮತ್ತೆ ಸದಸ್ಯರುಗಳಿಂದ ಈಗಾಗಲೇ ೭೭ ಲಕ್ಷ ರೂಪಾಯಿಗಳನ್ನು ಠೇವಣಿ ಪಡೆದುಕೊಂಡಿದ್ದು, ಇದರಲ್ಲಿ ೪೨ ಲಕ್ಷ ರೂಪಾಯಿಗಳನ್ನು ಡೆವಲಪ್‌ರ್‌ಗೆ ಪಾವತಿ ಮಾಡಿದ್ದಾರೆ. ಬಾಕಿ ಇನ್ನು ೩೫ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಆಧರೆ, ಅದಕ್ಕೆ ಸ್ಟೇ ಮಾಡಿದ್ದೇವೆ. ಇದರ ಬಗ್ಗೆ ತನಿಖೆ ಕೂಡ ನಡೆಸಲಾಗುತ್ತಿದೆ, ಮತ್ತೆ ಅಲ್ಲಿರುವ ಆಡಳಿತ ಮಂಡಳಿಯನ್ನು ರದ್ದು ಮಾಡಿ ಅಲ್ಲಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಅದರ ಮೇಲೆ ಸೂಕ್ತವಾಗಿ

ತುರ್ತು ಕ್ರಮವನ್ನು ತೆಗೆದುಕೊಂಡು ಸದಸ್ಯರುಗಳಿಗೆ ನ್ಯಾಯವನ್ನು ಒದಗಿಸುವ ಬಗ್ಗೆ ನಾವು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಅಲ್ಲಿರತಕ್ಕಂಥ ಸದಸ್ಯರ ರಕ್ಷಣೆ ಮಾಡುತ್ತೇವೆ ಮತ್ತು ಈ ರೀತಿಯಾಗಿ ಮಾಡಿರತಕ್ಕಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಇದರ ಬಗ್ಗೆ ಯಾವುದೇ ರೀತಿಯ ಅನುಮಾನ ಬೇಡವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ.ಟಿ. ಬಿ. ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಈಗಾಗಲೇ ೨೫ ನಿವೇಶನಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ. ಮಾರಾಟ ಮಾಡಿರತಕ್ಕಂಥದ್ದರ ಬಗ್ಗೆ ದಾಖಲಾತಿಗಳು ನಮ್ಮಲ್ಲಿ ಇದೆ.

ಶ್ರೀ ಜೆ.ಟಿ. ದೇವೇಗೌಡ : ನಾವು ಸಂಪೂರ್ಣವಾಗಿ ತನಿಖೆಯನ್ನು ಮಾಡಿ ಏನು ತಪ್ಪು ಮಾಡಿದ್ದಾಖುಎ, ಅದನ್ನು ಸಂಪೂರ್ಣ serutiny ಅದನ್ನು ಆಡಳಿತ ಮಂಡಳಿಯವರು ವಹಿಸಿಕೊಂಡು ಕೂಡಲೆ ಅದು ಸರ್ಕಾರದ ವಶಕ್ಕೆ ಬರುತ್ತದೆ, ಎಲ್ಲಾ ತನಿಖೆಯನ್ನು ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಟಿ. ಬಿ. ನಾಗರಾಜು : ಸಂಘಗಳು ಅವರು ಹೇಳಿದ ಹಾಗೆ ಬರೀ ಹೊಸಕೋಟೆಯಲ್ಲಿ ಇಲ್ಲ. ಎಲ್ಲಾ ಕಡೆಗಳಲ್ಲೂ ಇವೆ. ಈ ಬಗ್ಗೆಯೂ ಕೂಡ ಮಾನ್ಯ ಸಚಿವರು ಗಮನಹರಿಸಬೇಕು. ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಹೌಸಿಂಗ್ ಸೊಸೈಟಿಗಳು ಉತ್ತಮವಾಗೆ ಕೆಲಸ ಮಾಡುವಂತಹ ಸಹಕಾರ ಸಂಘಗಳೂ ಇವೆ. ಅದರಲ್ಲಿ ಯಾವ ರೀತಿಯಾಗಿ ಅಕ್ರಮಗಳು ನಡೆಸುತ್ತಿವೆ ಎನ್ನುವುದರ ಬಗ್ಗೆ ತುರ್ತು ಕ್ರಮವನ್ನು ಕೈಗೊಂಡು ಎಲ್ಲಾ Housing society ಗಳು ಕೂಡ ಸಕ್ರಮವಾಗಿ ನಡೆಯಬೇಕು. ಈಗ ನಮ್ಮಲ್ಲಿ ಬಿಡಿ ಇದೆ. ಅಲ್ಲಿಯೂ ಕೂಡ ವ್ಯವಸ್ಥಿತವಾಗಿ ನಿವೇಶನಗಳನ್ನು ಹಂಚುತ್ತಾರೆ. ಅದೇ ರೀತಿಯಾಗಿ

ಸಹಕಾರ ಸಂಘದವರೂ ಕೂಡ ಮಾಡುತ್ತಿದ್ದಾರೆ. ಯಾರು ಚೆನ್ನಾಗಿ ಮಾಡುತ್ತಾರೆ, ಅವರಿಗೆ ನಾವು ಬೆಂಬಲವನ್ನು ಕೊಡುತ್ತೇವೆ. ಯಾರು ಅತಿಕ್ರಮವಾಗಿ ಅನ್ಯಾಯವನ್ನು ಮಾಡುತ್ತಾರೆ. ಅವರ ಮೇಲೆ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎಲ್ಲಾ Housing ಯವರು ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಾರೆಂದು ನೀವು ಒಂದೊಂದು ತನಿಖೆಯನ್ನು ಮಾಡಿಸಿ ವರದಿಯನ್ನು ಒಪ್ಪಿಸುವುದು ಒಳ್ಳೆಯದು. ಏಕೆಂದರೆ, ಎಷ್ಟು ಸುಮಗಳು ಇವೆ, ಎಷ್ಟು ಂಘಗಳು ಬೈಲಾ ಪ್ರಕಾರ ನಡೆದುಕೊಳ್ಳುತ್ತಿವೆ. ಎಷ್ಟು Housing Society ಗಳು ಜನರಿಗೆ ಮೋಸವನ್ನು ಮಾಡಿದ್ದಾರೆಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡಬೇಕು.

## ಬೆಳಗಾವಿ ಜಿಲ್ಲೆಯಲ್ಲಿ ಬಿಡುಗಡೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೧೭ (೨೨೬೧)

ವಿಧಾನಸಭೆ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಿ)

ಉತ್ತರಿಸುವವರು : ಶ್ರೀ ಹೆಚ್. ಕೆ. ಕುಮಾರಸ್ವಾಮಿ ( ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಳಗಾವಿ ಜಿಲ್ಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ಇರುವ ಸರ್ಕಾರಿ ಹಾಗೂ ಬುದ್ಧಿಮಾಂದ್ಯ ಮಕ್ಕಳ ಶಾಲೆ | ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರದಿಂದ ನಡೆಯುತ್ತಿರುವ |